# ರಾಜ್ಯ ಚಿಟ್ಟೆ!



**ಭಾರತದಲ್ಲೇ ಅತಿ ದೊಡ್ಡ ಚಿಟ್ಟೆ ಎಂಬ ಹೆಸರು ಗಳಿಸಿರುವ ಸದರ್ನ್ ಬರ್ಡ್‌ವಿಂಗ್ ಚಿಟ್ಟೆಗೆ 'ರಾಜ್ಯ ಚಿಟ್ಟೆ' ಎಂಬ ಗೌರವ ದೊರಕಿರುವುದು ಸಂತಸದ ಸಂಗತಿ. ಈ ಚಿಟ್ಟೆಯ ಕುರಿತು ಜನರಿಗೆ ಅರಿವು ಮೂಡಿಸಲು ಇದು ಸಕಾಲ.**

ಚಿತ್ರ– ಲೇಖನ:
**ಪುಟ್ಟರಾಜು, ಕೈಗಾ**

ಸ್ವರ್ಣ ಅಥವಾ **southern birdwing** ಇದೀಗ 'ರಾಜ್ಯ ಚಿಟ್ಟೆ' ಎಂಬ ಗೌರವಕ್ಕೆ ಪಾತ್ರವಾಗಿದೆ. ಇದು ಭಾರತದ ಅತಿದೊಡ್ಡ ಚಿಟ್ಟೆ. ಹೀಗೆ ಚಿಟ್ಟೆಯೊಂದರ ಪ್ರಬೇಧಕ್ಕೆ ರಾಜ್ಯ ಚಿಟ್ಟೆಯ ಸ್ಥಾನಮಾನ ಕೊಟ್ಟ ದೇಶದ ಎರಡನೆಯ ರಾಜ್ಯ ಕರ್ನಾಟಕ. ಈ ಘೋಷಣೆ ಪಕ್ಷಿಪ್ರಿಯರಿಗಂತೂ ಸಂತೋಷ ತಂದಿದೆ.

ಈ ಚಿಟ್ಟೆಗಳ ಇರುವಿಕೆ ಒಂದು ಪ್ರದೇಶದ ಆರೋಗ್ಯಕರ ಹವಾಮಾನದ ಸೂಚಕವೂ ಹೌದು. ಅಲ್ಲದೆ ಅವುಗಳ ಆಹಾರ ಸಸ್ಯದ ಲಭ್ಯತೆಯ ಮಾನದಂಡವೂ ಆಗಿದೆ. ಆಹಾರ ಸರಪಳಿಯಲ್ಲಿ ಈ ಚಿಟ್ಟೆಗಳದು ಪ್ರಮುಖ ಪಾತ್ರ. ಪರಾಗಸ್ಪರ್ಶ ಕ್ರಿಯೆಯಲ್ಲಿಯೂ ಅಷ್ಟೇ.

ಇವುಗಳಲ್ಲಿ ಹುಲಿಗಳ ಗುಣವೊಂದಿದೆ! ತಮ್ಮ ಗಡಿ ದಾಟಿ ಬರುವ, ತಮ್ಮದೇ ಜಾತಿಯ ಇತರ ಚಿಟ್ಟೆಯೊಂದಿಗೆ ಕಾಳಗ ನಡೆಸುತ್ತವೆ. ಅರಣ್ಯದ ಹುಲಿಯಂತೆ ತಮ್ಮ ಕಾಲುಗಳ ಮೇಲೆ ನಿಂತು ಈ ಚಿಟ್ಟೆಗಳು ಹೀಗೆ ಬಡಿದಾಡುವುದನ್ನು ನೋಡುವುದೊಂದು ರೋಚಕ ಅನುಭವ. ತನ್ನ ಹಾರಾಟದ ವ್ಯಾಪ್ತಿ ಪ್ರದೇಶದಲ್ಲಿ ಮತ್ತೊಂದು ಗಂಡು ಚಿಟ್ಟೆ ಬರುವಂತೆಯೇ ಇಲ್ಲ. ಬಂದರೆ ಅದರ ಬೆನ್ನಟ್ಟಿ ಕೆಳಕ್ಕೆ ಕೆಡವಿಕೊಂಡು ಬಡಿದಾಡುತ್ತದೆ. ಇದರ ವೈಜ್ಞಾನಿಕ ಹೆಸರು **Troides minos.**

ಪ್ರತಿಯೊಂದು ರಾಜ್ಯಕ್ಕೂ ರಾಜ್ಯ ಪಕ್ಷಿ, ರಾಜ್ಯ ಪ್ರಾಣಿ ಮತ್ತು ರಾಜ್ಯ ಸಸ್ಯಗಳಿರುವುದು ಗೊತ್ತೇ ಇದೆ. ಆದರೆ ಭಾರತದಲ್ಲಿ ಚಿಟ್ಟೆಯೊಂದನ್ನು ರಾಜ್ಯ ಚಿಟ್ಟೆ ಎಂದು ಗುರುತಿಸಿದ ಮೊದಲ ರಾಜ್ಯ ಮಹಾರಾಷ್ಟ್ರ. ಅದು ನಾಮಕರಣಗೊಂಡದ್ದು 2015ರಲ್ಲಿ. ಮಹಾರಾಷ್ಟ್ರದಲ್ಲಿ ನೀಲ ಸುಂದರಿಯನ್ನು (ಬ್ಲ್ಯೂ ಮೊರ್ಮೋನ್) ರಾಜ್ಯಚಿಟ್ಟೆಯಾಗಿ ಅಲ್ಲಿನ ಸರ್ಕಾರ ಘೋಷಿಸಿದೆ. ನಮ್ಮ ಕರ್ನಾಟಕದ ಬಹುತೇಕ ಪ್ರದೇಶದಲ್ಲಿ, ಅದರಲ್ಲೂ ಪಶ್ಚಿಮಘಟ್ಟದಲ್ಲಿ ಈ ನೀಲ ಸುಂದರಿ ಯಥೇಚ್ಛವಾಗಿ ಕಾಣಸಿಗುತ್ತದೆ.



ರಾಜ್ಯ ಚಿಟ್ಟೆ ಎಂದು ನಾಮಕರಣ ಮಾಡಿದಾಕ್ಷಣ ಅವುಗಳ ಸಂಖ್ಯೆ ಏರುವುದಾಗಲೀ, ಸಂರಕ್ಷಣೆ ಹೆಚ್ಚು ಗಟ್ಟಿಗೊಳ್ಳುವುದಾಗಲೀ ಆಗುವುದಿಲ್ಲ ಎನ್ನುವುದು ನಿಜ. ಆದರೆ ಪ್ರಕೃತಿಯೊಂದಿಗೆ ಅವಿನಾಭಾವ ಸಂಬಂಧ ಹೊಂದಿರುವ ಚಿಟ್ಟೆಗಳ ಬಗ್ಗೆ, ಅವುಗಳ ಆಹಾರ ಸಸ್ಯಗಳ ಸಂರಕ್ಷಣೆಯ ಬಗ್ಗೆ ಜನರಲ್ಲಿ ತಿಳುವಳಿಕೆ ಮೂಡುವುದು ಸಾಧ್ಯ.

ಭಾರತದ ಅತಿ ದೊಡ್ಡ ಚಿಟ್ಟೆ ಸದರ್ನ್ ಬರ್ಡ್‌ವಿಂಗ್ ಹೆಚ್ಚಾಗಿ ಕಂಡುಬರುವುದು ದಕ್ಷಿಣ ಭಾರತದ ಕುರುಚಲು ಕಾಡು, ಎಲೆ ಉದುರುವ